ಕನಾ. ಟಕ ರಾಜ್ಯ ಪತ್ರಾಗಾರ
(ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4759
ದಿನಾಂಕ Date.....

MYSORE LEGISLATIVE ASSEMBLY

THIRTY-THIRD DAY

Thursday, 10th April 1958.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Accommodation to the Taluk Office Staff in Channarayapatna.

Q.—1643. Sri N. G. NARASIMHE GOWDA (Sravanabelagola).—

Will the Government be pleased to state :—

(*a*) whether they are aware of the inconvenience caused to the Taluk Office Staff in Channarayapatna for not providing them with quarters;

(*b*) whether they propose to take immediate action to provide accommodation to the Non-Gazetted Staff?

A.—Sri H. K. VEERANNA GOWDH (Minister for Public Works).—

(*a*) Government are not aware that any inconvenience has been caused.

(*b*) The question of providing accommodation is under examination.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪ್ರಶ್ನೆಯ (ಬ) ಭಾಗಕ್ಕೆ ಉತ್ತರವಾಗಿ ಪರಿಶೀಲನೆಮಾಡುತ್ತಿದ್ದೇವೆಂದು ಹೇಳಿದ್ದೀರಿ. ತಾವು ಈ ಚೆನ್ನರಾಯ ಪಟ್ಟಣ ತಾಲ್ಲೂಕು ಒಂದರ ವಿಚಾರವನ್ನು ಪರಿಶೀಲನೆ ಮಾಡುತ್ತಿದ್ದೀರೋ ಅಥವಾ ಇಡಿಯ ರಾಜ್ಯದ ಒಂದು ಯೋಜನೆಯನ್ನು ಈ ಸಂಬಂಧವಾಗಿ ಪರ್ಯಾಲೋಚನೆ ಮಾಡುತ್ತಿದ್ದೀರೋ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಈ ಪ್ರಶ್ನೆಯಲ್ಲೇನೋ ಕೇವಲ ಚೆನ್ನರಾಯ ಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಕೇಳಿದ್ದೀರಿ. ಆದರೆ ಸಾಧಾರಣವಾಗಿ ಈ ನೌಕರರ ವಸತಿ ಸೌಕರ್ಯಗಳ ಪರಿಸ್ಥಿತಿ ಎಲ್ಲ ತಾಲ್ಲೂಕುಗಳಲ್ಲೂ ಯಾವ ರೀತಿ ಇದೆಯೋ ಇಲ್ಲೂ ಅದೇ ಪರಿಸ್ಥಿತಿ ಇರುತ್ತದೆ. ಚೆನ್ನರಾಯ ಪಟ್ಟಣದ ತಾಲ್ಲೂಕು ಈ ದಿವಸವೇನೂ ಹೊಸದಾಗಿ ಆದುದಲ್ಲ. ಆ ಸ್ಥಳದಲ್ಲಿರತಕ್ಕ ತಾಲ್ಲೂಕು ಆಫೀಸುಗಳು ಬಹಳ ವರ್ಷಗಳಿಂದಲೂ ಅಲ್ಲಿ ನಡೆದುಕೊಂಡು ಬರುತ್ತಿವೆ. ಇಲ್ಲಿಯವರೆಗೂ ಅಲ್ಲಿ ಅಂಥ ಕಷ್ಟಗಳೇನೂ ಇದ್ದಂತೆ ಕಂಡಿರಲಿಲ್ಲ. ಆದರೆ ಈ ದಿವಸ ತಾವು ಇದ್ದಕ್ಕಿದ್ದಂತೆ ಪರಿಸ್ಥಿತಿ ಬಹಳ ತೊಂದರೆಗೊಳಗಾಗಿದೆ ಎಂದು ಹೇಳಿರತಕ್ಕ ಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ ಎಂಬುದು ಮೊದಲನೆಯ ವಿಚಾರವಾಯಿತು. ಇನ್ನು ಎರಡನೆಯ ವಿಚಾರವೆಂದರೆ ? ಈ ದಿವಸ ಎಲ್ಲ ಇಲಾಖೆಗಳ ನೌಕರರಿಗೂ ವಸತಿ ಸೌಕರ್ಯದ ಬಗ್ಗೆ ಕಟ್ಟಡಗಳನ್ನು ಸರ್ಕಾರದವರು ಕಟ್ಟಿಸಲು ಸಾಧ್ಯವಿಲ್ಲದ ಮಾತು ಎಂಬುದು. ಆದರೆ ಈವರೆಗೂ ಎಲೆಕ್ಟ್ರಿಕಲ್ ಇಲಾಖೆಯಲ್ಲ, ಪೋಲೀಸ್ ಇಲಾಖೆಯಲ್ಲ ಮತ್ತು ಎಲ್ಲೆಲ್ಲ ಕೆಲವು ಕಡೆ ಹೊಸದಾಗಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತಾಗುತ್ತಿದೆಯೋ ಅಲ್ಲಿ ಈ ಮೂರು ಬಾಬುಗಳಲ್ಲಿ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಪದ್ಧತಿ ಇದೆ. ಇನ್ನುಳಿದ ಇಲಾಖೆಗಳ ವಿಚಾರಕ್ಕೆ ಬಂದರೆ ಯಾವ ಯಾವ ಕಾಲಕ್ಕೆ ಎಷ್ಟೆಷ್ಟು ಹಣದ ಅನುಕೂಲತೆ ದೊರೆಯುತ್ತದೋ ಅದಕ್ಕನುಸಾರವಾಗಿ ಒಂದು ಒಟ್ಟು ಮೊಬಲಗನ್ನು ಬಡ್ಜೆಟ್ಟಿನಲ್ಲಿ ಅಲಾಟ್ ಮಾಡಿ ಅದನ್ನು ಜಿಲ್ಲಾವಾರಾಗಿ ಹಂಚಲಾಗುತ್ತದೆ.

ಶ್ರೀ ಎಚ್. ಜಿ ನರಸಿಂಹೇಗೌಡ.—ಚೆನ್ನರಾಯ ಪಟ್ಟಣಕ್ಕೆ P.W.D. ನದ್ ಡಿವಿಜ್ ಬಂದ ನಂತರ ಈ ತಾಲ್ಲೂಕ್ ಕಚೇರಿಯ ನೌಕರರಿಗೆ ವಾಸದ ಮನೆಗಳು ಸಿಕ್ಕದೆ ತೊಂದರೆಯಾಗಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾವು ಹೇಳುತ್ತಿರುವ ಅಂಶ ಪರಿಶೀಲನೆ ಮಾಡಬೇಕಾಗಿರುವಂಥಾದ್ದು. ಈಗ ಬಡ್ಜೆಟ್ಟಿನಲ್ಲಿ ತೆಗೆದಿಟ್ಟಿರುವ ಹಣದಲ್ಲಿ ಹಾಸನ ಜಿಲ್ಲೆಗೆಷ್ಟು ಬರುತ್ತದೆ; ಅದರಲ್ಲಿ ಚೆನ್ನರಾಯ ಪಟ್ಟಣಕ್ಕೆಷ್ಟು ದೊರೆಯುತ್ತದೆ ಎಂಬುದನ್ನೆಲ್ಲ ಮುಂದೆ ನೋಡಬೇಕಾಗಿದೆ. ಬಹುಶಃ ಅಲ್ಲಿಗೂ ಒಂದೆರಡು ಮನೆಗಳ ಬಗ್ಗೆ ಹಣ ದೊರೆತೀತು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪೋಲೀಸ್, ಎಲೆಕ್ಟ್ರಿಕರ್ ಇಲಾಖೆಗಳಂತೆ ಈ ರೆವಿನ್ಯೂ ಇಲಾಖೆಗೂ ಕೂಡ ನೌಕರರ ಬಗ್ಗೆ ಏಕೆ ಮನೆಗಳನ್ನು ಕಟ್ಟಿಸಿಕೊಡಬಾರದು ?

*Asterisk indicates that the remarks or speeches have not been revised by the member concerned.

ಶ್ರೀ ಎಚ್. ಕೆ. ವೀರಣ್ಣಗೌಡ.—ರೆವಿನ್ಯೂ ಇಲಾಖೆ ಇತ್ತೀಚೆಗೆ ಬಂದುದೇನೂ ಅಲ್ಲ. ಎಷ್ಟೋ ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದೆ. ಆದರೆ ತಾವು ಹೇಳುತ್ತಿರುವಷ್ಟು ತೊಂದರೆ ಅಲ್ಲಿ ಉಂಟಾಗಿದೆಯೇ ಎಂಬ ಅಂಶವನ್ನು ಪರಿಶೀಲನೆ ಮಾಡಬೇಕಾಗಿದೆ ಎಂದು ಮೊದಲೇ ತಿಳಿಸಿದ್ದೇನೆ.

Extension of Hiriyur Municipal Limit.

Q.—1654. Sri K. KENCHAPPA (Hiriyur).—

Will the Government be pleased to state :—

(*a*) whether the Hiriyur Muncipality has taken steps for acquisition of some Survey numbers for extending the Municipal limit with a view to provide suitable lands for construction of their houses;

(*b*) if so, since how long the proposal is pending with Government;

(*c*) whether they would take immediate steps to acquire the survey numbers and give possession to the Muncipality ?

A.—Sri R. CHENNIGARAMAIAH (Minister for Local Self-Government).—

(*a*) Yes.

(*b*) The proposal is not pending with Government.

(*c*) 13 acres-26 guntas of land in S. No. 1/1 and 1/2 has already been utilized by the Municipality though the Municipality has not paid the balance of Rs. 2,354-12-0 since 19th January, 1955. Action will be taken after receipt of specific proposals from the Municipality and after having deposited the balance of acquisition and appropriation charges in other cases.

ಶ್ರೀ ಕೆ. ಕೆಂಚಪ್ಪ.—(ಬ) ಗೆ ಉತ್ತರವಾಗಿ ಪೆಂಡಿಂಗ್ ಇಲ್ಲ ಎಂದು ಹೇಳಿ (ಸಿ)ಗೆ ಒದಗಿಸಿರುವ ಉತ್ತರದಲ್ಲಿ 13 ಎಕರೆ 26 ಗುಂಟೆ ಜಮೀನು ಅಕ್ವಯಿರ್ ಆಗಿ ಈ ಬಗ್ಗೆ 2,354ರೂಪಾಯಿ ಹನ್ನೆರಡಾಣೆ ಬಾಕಿ ಬರಬೇಕಾಗಿದೆ ಎಂದು ತಿಳಿಸೋಣವಾಗಿದೆ. ಈ ಜಮೀನಿಗೆ ಸಂಬಂಧಪಟ್ಟ ದಾಖಲೆಗಳು ಈಗ ಯಾವ ಆಫೀಸಿನಲ್ಲಿವೆ ?

*ಶ್ರೀ ಆರ್. ಚೆನ್ನಿಗರಾಮಯ್ಯ.—ಆ ದಾಖಲೆಗಳು ಸರ್ಕಾರದಲ್ಲಿ ಪೆಂಡಿಂಗ್ ಆಗಿಲ್ಲವೆಂದು ಅದರ ಅರ್ಥ.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ ಎಲ್ಲ ಪೆಂಡಿಂಗ್ ನಿಂತಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಬಂಧಪಟ್ಟ ಮುನಿಸಿಪಾಲಿಟಿಯಲ್ಲಿರಬೇಕು.

ಶ್ರೀ ಕೆ. ಕೆಂಚಪ್ಪ.—ಹಾಗಾದರೆ ಇಷ್ಟು ಹಣ ಬಾಕಿ ಇದೆ ಎಂಬುದು ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ 13 ಎಕರೆ ಜಮೀನಿನಲ್ಲಿ 7 ಎಕರೆ ಜಮೀನನ್ನು ಎಲೆಕ್ಟ್ರಿಕರ್ ಇಲಾಖೆ ಗೋಸ್ಕರವಾಗಿ ಸ.ನಂಬರ್ 275, 276, 277 ಗಳಲ್ಲಿ ಅಕ್ವಯಿರ್ ಮಾಡಿಕೊಳ್ಳಲಾಯಿತು. ಇನ್ನುಳಿದ ಜಮೀನನ್ನು ಈ ಹಿರಿಯೂರು ಮುನಿಸಿಪಾಲಿಟಿಗೆ ಅಕ್ವಯಿರ್ ಮಾಡಿಕೊಳ್ಳತಕ್ಕ ಬಗ್ಗೆ 8,242 ರೂಪಾಯಿಗಳ ಪೈಕಿ 5,888 ರೂಪಾಯಿಗಳನ್ನು ಪಾವತಿ ಮಾಡಿ ಬಾಕಿ ಹಣವನ್ನು ಹಾಗೆಯೇ ಇನ್ನೂ ನಿಲ್ಲಿಸಿಕೊಂಡಿದ್ದಾರೆ. ಈ ವಿಚಾರ ಅಲ್ಲಗೇ ನಿಂತುಹೋಗಿದೆ.

ಶ್ರೀ ಕೆ. ಕೆಂಚಪ್ಪ.—ಈಗ ಅದು ಯಾವ ಇಲಾಖೆಯಲ್ಲಿ ಪೆಂಡಿಂಗ್ ಇದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಯಲ್ಲಿದೆ.

ಶ್ರೀ ಕೆ. ಕೆಂಚಪ್ಪ.—2,354 ರೂಪಾಯಿ 12 ಆಣೆಯನ್ನು 1955ನೆಯ ಇಸವಿಯಿಂದ ಕೊಡಬೇಕಾಗಿದೆಯೆಂದು ತಮಗೆ ಯಾರು ತಿಳಿಸಿದರು ? ಮುನಿಸಿಪಾಲಿಟಿಯವರೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—8,933 ರೂಪಾಯಿಗಳು ಅಪ್ರೊಪ್ರಿಯೇಷನ್ ಚಾರ್ಜನ್ನು ಮುನಿಸಿಪಾಲಿಟಿಯವರು ಅಕ್ವೈರ್ ಮಾಡಿಕೊಂಡಿದ್ದಕ್ಕೆ ಕೊಡಬೇಕಾಗಿತ್ತು. ಇದರಲ್ಲಿ ಸ್ವಲ್ಪ ಮಾತ್ರ ಕೊಟ್ಟಿದ್ದಾರೆ. ಬಾಕಿ ಅಷ್ಟನ್ನು ಕೊಡಬೇಕಾಗುತ್ತದೆ ಎಂದು ತಿಳಿಸಿದ್ದೇವೆ.

ಶ್ರೀ ಕೆ. ಕೆಂಚಪ್ಪ.—ಇಷ್ಟು ಹಣ ಕೊಡಬೇಕೆಂದು ತಮಗೆ ತಿಳಿಸಿದವರು ಯಾರು ? ಮುನಿಸಿಪಾಲಿಟಿಯವರೇ ? ತಾಲ್ಲೂಕಿನವರೇ ಅಥವಾ ಡೆಪ್ಯುಟಿ ಕಮಿಷನರೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಯವರು ಡೆಪ್ಯುಟಿ ಕಮಿಷನರಿಗೆ ತಿಳಿಸುತ್ತಾರೆ. ಡೆಪ್ಯುಟಿ ಕಮಿಷನರು ನಮಗೆ ತಿಳಿಸುತ್ತಾರೆ.

ಶ್ರೀ ಕೆ. ಕೆಂಚಪ್ಪ.—ಸರ್ಕಾರದ ಹತ್ತಿರ ಪೆಂಡಿಂಗ್ ಇಲ್ಲವೆಂದು ಹೇಳುವುದರ ಅರ್ಥವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರದಲ್ಲಿ ಈ ಅಕ್ವಿಸಿಷನ್ ಕೇಸು ಪೆಂಡಿಂಗ್ ಇಲ್ಲವೆಂದೇ ಇದರ ಅರ್ಥ.

ಶ್ರೀ ಕೆ. ಕೆಂಚಪ್ಪ.—1955ನೆಯ ಇಸವಿಯಿಂದ ಇನ್ನೂ ಇದು ಬಗೆಹರಿಯದಿರಬೇಕಾದರೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ರಿಕಾರ್ಡ್ ಫೈನಲ್ ಆಗಿಲ್ಲ. 8,933 ರೂಪಾಯಿಗಳನ್ನು ಮುನಿಸಿಪಾಲಿಟಿಯವರು ಕೊಡಬೇಕಾಗಿತ್ತು, ಅದರ ಪೈಕಿ 5888ರೂಪಾಯಿಗಳನ್ನು ಕೊಟ್ಟಿದ್ದಾರೆ. ಬಾಕಿ ಹಣ ಕೊಡುವುದು ಅವರಲ್ಲಿ ಪೆಂಡಿಂಗ್ ಆಗಿದೆ. ನಮ್ಮಲ್ಲಲ್ಲ.

ಶ್ರೀ ಕೆ. ಕೆಂಚಪ್ಪ.—ಪ್ರಶ್ನೆಯ (*a*) ಭಾಗದಲ್ಲಿ "whether the Hiriyur Municipality has taken steps for acquisition" ಎಂದು ಕೇಳಿರುವುದಕ್ಕೆ ಉತ್ತರವಾಗಿ 'yes' ಎಂದು ಹೇಳಿದ್ದೀರಿ. ಆದರೆ ಮೂರನೆಯ ಭಾಗಕ್ಕೆ ಉತ್ತರದಲ್ಲಿ 2,588 ರೂಪಾಯಿ ಕೊಡತಕ್ಕ ವಿಚಾರ ಪೆಂಡಿಂಗ್ ಇದೆಯೆಂದು ಬೇರೆ ಹೇಳಿದ್ದೀರಿ. ಈಗ ಉತ್ತರ ಹೇಳುವುದಕ್ಕೂ ಇಲ್ಲಿ ಉತ್ತರ ಕೊಟ್ಟಿರುವುದಕ್ಕೂ ಒಂದಕ್ಕೊಂದಕ್ಕೆ ಸಮಂಜಸವಾಗಿಲ್ಲ. ಎಲ್ಲ ನಿಜವಾಗಿಯೂ ಪೆಂಡಿಂಗ್ ನಲ್ಲದೆಯೆಂದು ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ರಿಕಾರ್ಡ್ ಪ್ರಕಾರ 8,933 ರೂಪಾಯಿಗಳನ್ನು ಮುನಿ